

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–03–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪ್ರಥಮ ಖಲೀಫರ ಆಯ್ಕೆಯ ಬಗ್ಗೆ ಹಝ್ರತ್ ಹಬ್ಬಾಬ್ ಬಿನ್ ಮುಂಝಿರ್‌ರ ಅಭಿಪ್ರಾಯದ ಕುರಿತು ತಾರೀಕ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಖುರೈಶಿನ ಮುಹಾಜಿರರು ಅನ್ಸಾರರ ಅಧೀನದಲ್ಲೇ ಇರುವರು. ಆದ್ದರಿಂದ ಈ ವಿಷಯದಲ್ಲಿ ಒಬ್ಬ ಅಮೀರ್ ಅನ್ಸಾರ್‌ರಿಂದ ಮತ್ತೊಬ್ಬ ಅಮೀರ್ ಖುರೈಶಿನ ಮುಹಾಜಿರರಿಂದ ಆಗಬೇಕು ಎಂಬ ಅನ್ಸಾರರ ತೀರ್ಮಾನವನ್ನು ಒಪ್ಪಬೇಕು. ಆದರೆ ಬಶೀರ್ ಬಿನ್ ಸಅದ್‌ರ ಅಭಿಪ್ರಾಯ ಪ್ರಕಾರ ಮುಹಮ್ಮದ್(ಸ)ರ ಸಮುದಾಯವಾದ ಖುರೈಶಿಯರೇ ನೇತೃತ್ವಕ್ಕೆ ಹೆಚ್ಚು ಅರ್ಹರು ಮತ್ತು ಯೋಗ್ಯರು. ಆದರೆ ಸುನನ್ ಕುಬ್ರಾ ಲಿನ್ನಿಸಾಯಿಯಲ್ಲಿ ಒಂದು ಪ್ರಸ್ತಾಪವಿದೆ. ಅದರ ಪ್ರಕಾರ ಆ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೀಗೆ ಹೇಳಿದರು: ಎರಡು ಖಡ್ಗಗಳು ಒಂದು ಕವಚದಲ್ಲಿ ಇರಲಾರವು. ಅದರೊಂದಿಗೆ ಅವರು ಹಝ್ರತ್ ಅಬೂಬಕರ್(ರ)ರ ಕೈಯನ್ನು ಹಿಡಿದುಕೊಂಡು ಅವರ ಮೂರು ವೈಶಿಷ್ಟ್ಯಗಳನ್ನು ಪ್ರಸ್ತಾಪಿಸುತ್ತಾ ಹೇಳಿದರು: **ಇಧ್ ಹುಮಾ ಫಿಲ್ ಗ್ಹಾರಿ ಇಧ್ ಯಖೂಲು ಲಿಸಾಹಿಬಿಹೀ ಲಾ ತಹ್‌ಝನ್ ಇನ್ನಲ್ಲಾಹ ಮಅನಾ.** ಎಂದರೆ ಅವರಿಬ್ಬರೂ ಗುಹೆಯಲ್ಲಿದ್ದಾಗ ಹಝ್ರತ್ ಪೈಗಂಬರ್(ಸ) ತನ್ನ ಸ್ನೇಹಿತನೊಡನೆ ಹೇಳಿದರು: ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಈ ಸಂದರ್ಭದಲ್ಲಿ ಗುಹೆಯಲ್ಲಿ ಇದ್ದ ಇಬ್ಬರು ವ್ಯಕ್ತಿಗಳು ಯಾರಾಗಿದ್ದರು? ಹಝ್ರತ್ ಪೈಗಂಬರ್(ಸ)ರ ಜೊತೆಗಾರ ಯಾರಾಗಿದ್ದರು? ಹೀಗೆ ಹೇಳಿಕೊಂಡು ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರಿಗೆ ಬೈಅತ್ ಮಾಡಿದರು. ಆಗ ಪೂರ್ತಿ ಸಮುದಾಯ ಹಝ್ರತ್ ಅಬೂಬಕರ್(ರ)ರಿಗೆ ಬೈಅತ್ ಮಾಡಿತು. ಈ ಬೈಅತ್ 'ಬೈಅತೇ ಸಖೀಫ' ಮತ್ತು 'ಬೈಅತೇ ಖ಼ಾಸ' ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ.

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಮರುದಿನ ಹಝ್ರತ್ ಉಮರ್(ರ) ಭಾಷಣ ಮಾಡುತ್ತಾ ಹೇಳಿದರು: ಎಲ್ಲೈ ಜನರೇ, ಹಝ್ರತ್ ಪೈಗಂಬರ್(ಸ) ನಿಧನಗೊಂಡಿಲ್ಲವೆಂದು ನಾನು ಹೇಳಿದ್ದೆ. ಇದರ ಪ್ರಸ್ತಾಪ ನಾನು ಪವಿತ್ರ ಖುರ್‌ಆನಿನಲ್ಲಿ ಎಲ್ಲೂ ಕಂಡಿಲ್ಲ. ಹಝ್ರತ್ ಪೈಗಂಬರ್(ಸ) ಕೂಡ ಹಾಗೆ ನನ್ನೊಡನೆ ಹೇಳಿರಲಿಲ್ಲ. ನಾವು ಮೊದಲು ಮೃತಪಡುವೆವು ಎಂದೂ ನಮ್ಮಲ್ಲಿ ಕೊನೆಯವರಾಗಿ ಹಝ್ರತ್ ಪೈಗಂಬರ್(ಸ) ಇರುವರು ಎಂದೂ ನಾನು ಭಾವಿಸಿದ್ದೆ. ಆದರೆ ನಿಮ್ಮಲ್ಲಿ ಅತ್ಯಂತ ಉತ್ತಮರೂ ಹಝ್ರತ್ ಪೈಗಂಬರ್(ಸ)ರ ಸ್ನೇಹಿತರೂ ಹಾಗೂ ಗುಹೆಯಲ್ಲಿದ್ದಾಗ ಇಬ್ಬರಲ್ಲಿ ಒಬ್ಬರೂ ಆಗಿದ್ದ ಒಬ್ಬ ವ್ಯಕ್ತಿಗೆ ಅಲ್ಲಾಹನು ನಿಮ್ಮ ಕಾರ್ಯಗಳನ್ನು ಒಪ್ಪಿಸಿರುವನು. ಆದ್ದರಿಂದ ಎದ್ದೇಳಿರಿ ಮತ್ತು ಅವರ ಬೈಅತ್ ಮಾಡಿರಿ. ಹೀಗೆ ಜನರು ಸಖೀಫ ಬೈಅತಿನ ನಂತರ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿದರು.

ಹಝ್ರತ್ ಅಬೂಬಕರ್(ರ) ಸಾರ್ವಜನಿಕ ಬೈಅತ್ತಿನ ದಿನದಂದು ಹೀಗೊಂದು ಭಾಷಣವನ್ನು ಮಾಡಿದರು: ಎಲ್ಲೈ ಜನರೇ, ಖಂಡಿತವಾಗಿಯೂ ನನ್ನನ್ನು ನಿಮ್ಮ ಮೇಲೆ ಅಧಿಕಾರಿಯನ್ನಾಗಿ ಮಾಡಲಾಗಿದೆ. ಆದರೆ ನಾನು ನಿಮ್ಮಲ್ಲಿ ಅತ್ಯುತ್ತಮನು ಅಲ್ಲ. ನಾನು ಒಳ್ಳೆಯ ಕೆಲಸ ಮಾಡಿದರೆ, ನನಗೆ ನೆರವಾಗಿರಿ. ನಾನು ತಪ್ಪಾದ ಮಾರ್ಗವನ್ನು ಅವಲಂಬಿಸಿದರೆ, ನನ್ನನ್ನು ನೇರಮಾರ್ಗಕ್ಕೆ ತನ್ನಿರಿ. ನಾನು ಅಲ್ಲಾಹನ ಮತ್ತು ಅವನ ಪ್ರವಾದಿಯ ಅನುಸರಣೆ ಮಾಡುವವನಾದರೆ, ನೀವು ನನ್ನನ್ನು ಅನುಸರಿಸಿರಿ. ನಾನು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಅನುಸರಿಸದಿದ್ದರೆ ನನ್ನನ್ನು ಅನುಸರಿಸುವುದು ನಿಮಗೆ ಕಡ್ಡಾಯವಲ್ಲ.

ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಬೈಅತ್ ಮಾಡಿದ್ದ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಅಲ್ಲಾಮ ಇಬ್ನು ಕಸೀರ್ ಹೇಳುತ್ತಾರೆ: ಹಝ್ರತ್ ಅಲಿ(ರ) ಹಝ್ರತ್ ಪೈಗಂಬರ್(ಸ)ರ ನಿಧನದ ಮೊದಲ ಅಥವಾ ಎರಡನೇ ದಿನ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿದ್ದರು. ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಎಂದಿಗೂ ಕೈಬಿಟ್ಟಿರಲಿಲ್ಲ ಮತ್ತು ಹಝ್ರತ್ ಅಬೂಬಕರ್(ರ)ರ ಹಿಂದೆ ನಮಾಝ್ ನಿರ್ವಹಿಸುವುದನ್ನು ಎಂದಿಗೂ ಉಪೇಕ್ಷಿಸಿರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಲಿ(ರ) ಆರಂಭದಲ್ಲಿ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿರಲಿಲ್ಲ. ಆದರೆ ಅನಂತರ ಒಂದು ಬಾರಿ ಚಿಂತಿತರಾಗಿ ಮುಂಡಾಸು ಕೂಡ ಕಟ್ಟದೇ ಟೋಪಿಯನ್ನು ಮಾತ್ರ ಹಾಕಿಕೊಂಡು ಬೈಅತ್ ಮಾಡಲು ಹೋದರು ಮತ್ತು ಮುಂಡಾಸನ್ನು ಅನಂತರ ತರಿಸಿದರು. ಬೈಅತ್ ಮಾಡುವುದರಲ್ಲಿ ತಡಮಾಡುವುದು ದೊಡ್ಡ ಪಾಪವಾಗಿದೆ ಎಂದು ಯೋಚಿಸಿ ಬೇಗನೇ ಹೋಗಿದ್ದರು ಎಂದು ಇದರಿಂದ ತಿಳಿದುಬರುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಮಕ್ಕದ ಒಬ್ಬ ಸಾಮಾನ್ಯ ವ್ಯಾಪಾರಿಯಾಗಿದ್ದರು. ಆದರೆ ಮುಹಮ್ಮದ್ ರಸೂಲುಲ್ಲಾಹ್

ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಅನುಸರಣೆಯಿಂದ, ಅವರಿಗೆ ಎಂತಹ ಪದವಿ ಲಭಿಸಿತ್ತು ಎಂದರೆ, ಇಂದು ಲೋಕ ಪೂರ್ತಿ ಗೌರವಾದರದಿಂದ ಅವರ ಹೆಸರನ್ನು ಪ್ರಸ್ತಾಪಿಸುತ್ತಿದೆ. ಅಬೂಬಕರ್(ರ) ಖ಼ಲೀಫರಾದರು ಎಂಬ ಸುವಾರ್ತೆಯನ್ನು ಒಬ್ಬರು ಅವರ ತಂದೆಗೆ ತಿಳಿಸಿದರು. ಅವರ ತಂದೆಗೆ ಮೊದಲು ಅದನ್ನು ನಂಬಲಾಗಲಿಲ್ಲ. ಆದರೆ ಅವರಿಗೆ ಖಚಿತಪಡಿಸಲಾದಾಗ ಅವರು ಹೇಳಿದರು: ಅಲ್ಲಾಹು ಅಕ್ಬರ್, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದು ಎಂತಹ ವೈಭವ! ಅಬೂಖಹಾಫರ ಮಗನನ್ನು ಅರೇಬಿಯರು ತಮ್ಮ ಸರದಾರನನ್ನಾಗಿ ಅಂಗೀಕರಿಸಿದ್ದಾರೆ. ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಖಂಡಿತವಾಗಿಯೂ ತಿಳಿಯಿರಿ, ಅಲ್ಲಾಹನು ಯಾರದ್ದೇ ಔದಾರ್ಯವನ್ನು ತನ್ನ ಬಳಿ ಇರಿಸುವುದಿಲ್ಲ. ಒಬ್ಬನು ಅಲ್ಲಾಹನಿಗಾಗಿ ಕೊಡುವುದರ ಸಾವಿರ ಅಥವಾ ಲಕ್ಷಗಟ್ಟಲೆ ಪಟ್ಟು ಹೆಚ್ಚು ಅಲ್ಲಾಹನು ಮರಳಿ ಕೊಡುತ್ತಾನೆ. ಅಬೂಬಕರ್(ರ) ಮಕ್ಕದಲ್ಲಿ ಒಂದು ಮಾಮೂಲಿ ಮನೆಯನ್ನು ಬಿಟ್ಟು ಹೋಗಿದ್ದರು. ಆದರೆ ಅಲ್ಲಾಹನು ಅದಕ್ಕೆ ಪ್ರತಿಫಲವಾಗಿ ಅವರನ್ನು ಒಂದು ಸಾಮ್ರಾಜ್ಯದ ಅಧಿಕಾರಿಯನ್ನಾಗಿ ಮಾಡಿದನು.

ಹಝ್ರತ್ ಅಬೂಬಕರ್(ರ) ಒಂದು ಬಾರಿ ಕನಸಿನಲ್ಲಿ ಹೀಗೆ ಕಂಡರು: ಅವರ ದೇಹದಲ್ಲಿ ಒಂದು ಜೋಡಿ ಯಮನೀ ಚಾದರ ಇತ್ತು. ಆದರೆ ಅದರ ಮೇಲ್ಭಾಗದಲ್ಲಿ ಎರಡು ಕಲೆಗಳಿದ್ದುವು. ಹಝ್ರತ್ ಪೈಗಂಬರ್(ಸ) ಈ ಕನಸಿನ ಕುರಿತು ಹೇಳಿದರು: ಯಮನೀ ಚಾದರದ ಅರ್ಥವೇನೆಂದರೆ, ನಿಮಗೆ ಉತ್ತಮ ಮಕ್ಕಳು ಲಭಿಸುವುವು ಮತ್ತು ಎರಡು ಗುರುತುಗಳ ಅರ್ಥ ಎರಡು ವರ್ಷಗಳ ನೇತೃತ್ವವಾಗಿದೆ. ಎಂದರೆ, ನೀವು ಎರಡು ವರ್ಷಗಳ ಕಾಲ ಮುಸ್ಲಿಮರ ಅಧಿಕಾರಿಯಾಗಿ ಇರುವಿರಿ.

ಖ಼ಿಲಾಫತಿನ ಆಯ್ಕೆಯ ನಂತರ ಹಝ್ರತ್ ಅಬೂಬಕರ್(ರ)ರ ವೈಯಕ್ತಿಕ ಖರ್ಚುಗಳಿಗಾಗಿ ವಾರ್ಷಿಕ 6 ಸಾವಿರ ದಿರ್ಹಮಿನ ಗೌರವ ಧನ ಮಂಜೂರು ಮಾಡಲಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ) ನಿಧನದ ಸಮಯ ಸಮೀಪವಾದಾಗ ತನ್ನ ಸಂಬಂಧಿಕರೊಡನೆ ಹೀಗೆ ಆದೇಶಿಸಿದರು: ನಾನು ಬೈತುಲ್‌ಮಾಲಿನಿಂದ ಪಡೆದ ಆ ವೇತನವನ್ನು ಪೂರ್ಣವಾಗಿ ಮರಳಿಸಿರಿ. ಅದರ ಮರುಪಾವತಿಗಾಗಿ ನನ್ನ ಕೆಲವು ಭೂಸ್ವತ್ತುಗಳನ್ನು ಮಾರಾಟ ಮಾಡಿರಿ. ಹಝ್ರತ್ ಉಮರ್(ರ) ಖ಼ಲೀಫರಾದ ನಂತರ ಆ ಹಣ ಅವರ ಬಳಿಗೆ ತಲುಪಿದಾಗ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಹೇ ಅಬೂಬಕರ್, ನೀವು ನಿಮ್ಮ ಉತ್ತರಾಧಿಕಾರಿಗಳಿಗೆ ಬಹಳ ದೊಡ್ಡದಾದ ಭಾರವನ್ನು ಹಾಕಿದ್ದೀರಿ.

ಖುಲಫಾಉ ರಾಶಿದೀನ್‌ರಲ್ಲಿ ಹಝ್ರತ್ ಅಬೂಬಕರ್(ರ)ರ ಎರಡುಕಾಲು ವರ್ಷಗಳ ಹ್ರಸ್ವವಾದ ಕಾಲಘಟ್ಟವು ಸುವರ್ಣ ಕಾಲಘಟ್ಟವೆಂದು ಹೇಳಲ್ಪಡಲು ಅರ್ಹವಾಗಿತ್ತು. ಏಕೆಂದರೆ ಹಝ್ರತ್ ಅಬೂಬಕರ್(ರ)ರಿಗೆ ಅತ್ಯಂತ ಹೆಚ್ಚು ಅಪಾಯಗಳನ್ನು ಮತ್ತು ವಿಪತ್ತುಗಳನ್ನು ಎದುರಿಸಬೇಕಾಗಿ ಬಂದಿತ್ತು. ಆದರೆ ಅಲ್ಲಾಹನ ಅಸಾಧಾರಣವಾದ ಸಹಾಯ ಮತ್ತು ನೆರವುಗಳ ಕಾರಣದಿಂದ ಹಝ್ರತ್ ಅಬೂಬಕರ್(ರ)ರ ಶ್ರೇಷ್ಠವಾದ ಧೈರ್ಯ, ಶೌರ್ಯ, ವಿವೇಕ ಮತ್ತು ತೀಕ್ಷ್ಣಗ್ರಹಿಕೆಯಿಂದ ಸ್ವಲ್ಪ ಕಾಲದಲ್ಲೇ ಭಯ ಮತ್ತು ಅಪಾಯಗಳ ಎಲ್ಲ ಮೋಡಗಳು ಚದುರಿಹೋದುವು ಮತ್ತು ಎಲ್ಲ ಭಯಗಳು ಸಮಾಧಾನವಾಗಿ ಮಾರ್ಪಾಡಾದುವು.

ಹಝ್ರತ್ ಅಬೂಬಕರ್(ರ)ರಿಗೆ ಆರಂಭದಲ್ಲೇ ಐದು ರೀತಿಯ ದುಃಖಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತ್ತು. ಒಂದು, ಹಝ್ರತ್ ಪೈಗಂಬರ್(ಸ)ರ ವಿಯೋಗದ ದುಃಖ. ಎರಡು, ಖ಼ಿಲಾಫತಿನ ಚುನಾವಣೆ ಮತ್ತು ಸಮುದಾಯದಲ್ಲಿ ಪಿತೂರಿ ಮತ್ತು ಭಿನ್ನಾಭಿಪ್ರಾಯದ ಭಯಾಶಂಕೆ. ಮೂರು, ಉಸಾಮರ ಸೈನ್ಯವನ್ನು ಕಳುಹಿಸುವುದರ ಬಗ್ಗೆ ಇದ್ದ ಸಮಸ್ಯೆ. ನಾಲ್ಕು, ಮುಸ್ಲಿಮರೆಂದು ಹೇಳಲ್ಪಡುವ ಕೆಲವರು ಝಕಾತ್ ನೀಡುವುದನ್ನು ನಿರಾಕರಿಸುವುದು ಮತ್ತು ಮದೀನದ ಮೇಲೆ ದಾಳಿ ನಡೆಸುವುದು. ಅದನ್ನು ಚರಿತ್ರೆಯಲ್ಲಿ ಫಿತ್ನ ಮಾನಿಈನೇ ಝಕಾತ್ ಎಂದು ಹೇಳಲಾಗುತ್ತದೆ. ಎಂದರೆ ಝಕಾತ್ ಕೊಡದೇ ಇರುವವರ ಪಿತೂರಿ. ಐದು, ಧರ್ಮತ್ಯಾಗಿಗಳ ಪಿತೂರಿ, ಎಂದರೆ ಬಹಿರಂಗವಾಗಿ ದಂಗೆ ಮತ್ತು ಯುದ್ಧದ ಘೋಷಣೆ ಮಾಡಿದ ದುಷ್ಟರು ಮತ್ತು ವಿದ್ರೋಹಿಗಳು. ಸ್ವತಃ ಪ್ರವಾದಿ ಎಂದು ವಾದಿಸುವವರು ಈ ದಂಗೆಯಲ್ಲಿ ಭಾಗಿಯಾದರು. ಭಯದ ಈ ಎಲ್ಲ ಅವಸ್ಥೆಗಳಲ್ಲಿ ವಿಪತ್ತುಗಳನ್ನು ಮತ್ತು ಪಿತೂರಿಗಳನು ಬೇರುಸಹಿತ ಕಿತ್ತುಹಾಕುವುದರಲ್ಲಿ ಅಲ್ಲಾಹನು ಹಝ್ರತ್ ಅಬೂಬಕರ್(ರ)ರಿಗೆ ಯಶಸ್ಸು ನೀಡಿದನು.

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಅಬೂಬಕರ್(ರ)ರನ್ನು ಮೂಸಾ(ಅ)ರ ಮೊದಲ ಖ಼ಲೀಫರಾದ ಯೂಶಅ್ ಬಿನ್ ನೂನ್‌ರಿಗೆ ಹೋಲಿಸಿ ಹಝ್ರತ್ ಅಬೂಬಕರ್(ರ)ರಿಗೆ ಎದುರಿಸಬೇಕಾಗಿ ಬಂದ ಸಮಸ್ಯೆಗಳು, ವಿಪತ್ತುಗಳು, ವಿಜಯಗಳು ಹಾಗೂ ಯಶಸ್ಸುಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ:

وَعَدَ اللّٰهُ الَّذِينَ آمَنُوا مِنكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي
الْأَرْضِ كَمَا اسْتَخْلَفَ الَّذِينَ مِن قَبْلِهِمْ

ಎಂದರೆ, ‘ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನು’ ಎಂಬ ವಚನದಿಂದ ಮುಹಮ್ಮದೀ ಖ಼ಿಲಾಫತ್ ಮತ್ತು ಮೂಸವೀ ಖ಼ಿಲಾಫತಿನಲ್ಲಿ ಹೋಲಿಕೆ ಸಾಬೀತಾಗುತ್ತದೆ. ಈ ಹೋಲಿಕೆಯ ಮೊದಲ ಬುನಾದಿ ಹಾಕಿದವರು ಹಝ್ರತ್ ಅಬೂಬಕರ್(ರ) ಮತ್ತು ಈ ಸಾಮ್ಯತೆಯ ಕೊನೆಯ ಮಾದರಿಯನ್ನು ತೋರಿಸುವವರು ಮುಹಮ್ಮದೀ ಖ಼ಿಲಾಫತಿನ ಕೊನೆಯ ಖ಼ಲೀಫರೂ ಖಾತಮುಲ್ ಖುಲಫರೂ ಆದ ವಾಗ್ದತ್ತ ಮಸೀಹರಾಗಿರುವರು. ಯಶೂಅ್ ಬಿನ್ ನೂನ್ ಮತ್ತು ಹಝ್ರತ್ ಅಬೂಬಕರ್(ರ)ರ ಹೋಲಿಕೆಯನ್ನು ಎರಡೂ

ಖ಼ಿಲಾಫತುಗಳ ಆರಂಭದಲ್ಲೂ ಹಾಗೂ ಹಝ್ರತ್ ಈಸಾ ಬಿನ್ ಮರ್‌ಯಮ್ ಮತ್ತು – ಈ ಸಮುದಯದ ವಾಗ್ದತ್ತ ಮಸೀಹ್‌ರ ಹೋಲಿಕೆಯನ್ನು ಎರಡೂ ಖ಼ಿಲಾಫತುಗಳ ಕೊನೆಯಲ್ಲೂ ಅಲ್ಲಾಹನು ಸ್ಪಷ್ಟವಾಗಿ ತೋರಿಸಿದನು. ಹಝ್ರತ್ ಮೂಸಾ(ಅ)ರ ನಿಧನದ ನಂತರ ಬನೀ ಇಸ್ರಾಈಲರು ಹಝ್ರತ್ ಯಶೂಅ್ ಬಿನ್ ನೂನ್‌ರಿಗೆ ವಿಧೇಯರಾಗಿದ್ದ ಹಾಗೆಯೇ ಎಲ್ಲರೂ ಹಝ್ರತ್ ಪೈಗಂಬರ್(ಸ)ರ ಅಗಲುವಿಕೆಯ ದುಃಖದ ನಂತರ ಮನಸ್ಸಾರೆ ಹಝ್ರತ್ ಅಬೂಬಕರ್(ರ)ರ ಖ಼ಿಲಾಫತನ್ನು ಅಂಗೀಕರಿಸಿದರು.

ಖ಼ಿಲಾಫತಿನ ಬಗ್ಗೆ ಇರುವ ಪವಿತ್ರ ಖುರ್‌ಆನಿನ ವಚನದ ಆಧಾರದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಹಝ್ರತ್ ಮೂಸಾ(ಅ)ರ ನಂತರ ಸ್ಥಾಪಿತವಾದ ಖಿಲಾಫತಿನಂತೆ ಇರುವ ಖ಼ಿಲಾಫತನ್ನು ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಲ್ಲಿ ಸ್ಥಾಪಿಸುವನು, ಇಸ್ಲಾಂ ಧರ್ಮವನ್ನು ಭೂಮಿಯಲ್ಲಿ ನೆಲೆಯೂರುವಂತೆ ಮಾಡುವನು, ಅದನ್ನು ಸುದೃಢಗೊಳಿಸುವನು ಮತ್ತು ಭಯದ ಸ್ಥಿತಿಯನ್ನು ನೆಮ್ಮದಿಯ ಸ್ಥಿತಿಗೆ ಬದಲಾಯಿಸುವನು ಎಂದು ಅಲ್ಲಾಹನು ವಾಗ್ದಾನ ಮಾಡಿರುವನು. ಭಯದ ಕಾಲಘಟ್ಟ ಬರುವುದು ಮತ್ತು ಸಮಾಧಾನ ಇಲ್ಲವಾಗುವುದು ಎಂದೂ ಈ ವಚನದಲ್ಲಿ ಸೂಚನೆಯಿದೆ. ಆದರೆ ಅಲ್ಲಾಹನು ಆ ಭಯದ ಕಾಲವನ್ನು ಪುನಃ ನೆಮ್ಮದಿಯನ್ನಾಗಿ ಬದಲಾಯಿಸುವನು ಎಂದೂ ಈ ವಚನದಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿರುವನು. ಇದೇ ಭಯದ ಸ್ಥಿತಿ ಯೂಶಅ್ ಬಿನ್ ನೂನ್‌ರಿಗೆ ಎದುರಿಸಬೇಕಾಗಿ ಬಂದಿತ್ತು. ಅವರನ್ನು ಅಲ್ಲಾಹನು ತನ್ನ ವಚನಗಳ ಮೂಲಕ ಸಮಾಧಾನ ಪಡಿಸಿದ ಹಾಗೆಯೇ ಹಝ್ರತ್ ಅಬೂಬಕರ್(ರ)ರಿಗೂ ಅಲ್ಲಾಹನ ವಚನದಿಂದ ಸಮಾಧಾನ ನೀಡಲಾಯಿತು.

(ಹುಝೂರ್ ಲೋಕದ ಈಗಿನ ಭಯಾನಕ ಅವಸ್ಥೆಗಳಿಗಾಗಿ ದುಆ ಮಾಡಲು ಮನವಿ ಮಾಡುತ್ತಾ ಹೇಳಿದರು:) ಈಗಂತು ಅಣ್ವಸ್ತ್ರ ಯುದ್ಧದ ಬೆದರಿಕೆಗಳನ್ನು ಕೂಡ ನೀಡಲಾಗುತ್ತಿವೆ. ನಾನು ಹಿಂದೆಯೂ ಅನೇಕ ಬಾರಿ ಹೇಳಿದಂತೆ ಅದರ ದುಷ್ಪರಿಣಾಮಗಳನ್ನು ಮುಂದಿನ ಪೀಳಿಗೆಗಳಿಗೂ ಸಹಿಸಬೇಕಾಗುವುವು. ಅಲ್ಲಾಹನಿಗೆ ಮಾತ್ರ ಇವರಿಗೆ ಬುದ್ಧಿ ಕೊಡಲು ಸಾಧ್ಯ. ಈ ದಿನಗಳಲ್ಲಿ ದುರೂದ್ ಪ್ರಾರ್ಥನೆಗಳನ್ನು ಮತ್ತು ಇಸ್ತಿಗ್ಫ಼ಾರನ್ನು ಬಹಳವಾಗಿ ಮಾಡುತ್ತಿರಿ.

**ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖ಼ಿರತಿ ಹಸನತನ್ ವಖಿನಾ ಅಧ಼ಾಬನ್ನಾರ್** ಎಂಬ ಪ್ರಾರ್ಥನೆಯನ್ನು ರುಕೂಅ್‌ನ ನಂತರ ನೆಟ್ಟಗೆ ನಿಂತು (ಇಅ್‌ತಿದಾಲ್‌ನಲ್ಲಿ) ಮಾಡಬೇಕೆಂದು ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ವಿಶೇಷವಾಗಿ ಜಮಾಅತಿಗೆ ಉಪದೇಶ ನೀಡಿದ್ದರು. ಆದ್ದರಿಂದ ಈಗಿನ ಸ್ಥಿತಿಯಲ್ಲಿ ಇದನ್ನು ಸಹ ಬಹಳವಾಗಿ ಓದುವ ಆವಶ್ಯಕತೆಯಿದೆ. ಅಲ್ಲಾಹನು ಒಳಿತುಗಳನ್ನು ಸಹ ದಯಪಾಲಿಸಲಿ ಮತ್ತು ಎಲ್ಲ ವಿಧದ ಬೆಂಕಿಯ ಶಿಕ್ಷೆಗಳಿಂದಲೂ ಎಲ್ಲರನ್ನೂ ಸಂರಕ್ಷಿಸಲಿ. ಆಮೀನ್.

(ಹುಝೂರ್ ಕೊನೆಯಲ್ಲಿ ಸಿರಿಯದ ಸನ್ಮಾನ್ಯ ಅಬುಲ್‌ಫರಜುಲ್ ಹಸನಿ ಸಾಹಿಬ್‌ರ ನಿಧನದ ಬಗ್ಗೆ ಪ್ರಸ್ತಾಪಿಸುತ್ತಾ ಅವರು ಜಮಾಅತಿಗೆ ಮಾಡಿದ ಸೇವೆಗಳನ್ನು ವಿವರಿಸಿದ ಮೇಲೆ ಜುಮಾ ನಂತರ ಅವರ ಜನಾಝ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 04-03-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**:* *khutuba.kannada@gmail.com*



**You can find all the Sermons archived at**: www.alislam.org/friday-sermon